ಅಧ್ಯಕ್ಷರು:– ನಿಮಗೇ Constitution ಬಗ್ಗೆ ಗೊತ್ತಿರುವುದು, ಬೇರೆ ಯಾರಿಗೂ ಗೊತ್ತಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಸಭಾಧ್ಯಕ್ಷರೆ, ದಯವಿಟ್ಟು ನಾನು ಮುಖ್ಯ ಮಂತ್ರಿಗಳವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪರಿಶಿಷ್ಟ ಜಾತಿ ಜನಾಂಗದವರಿಗೆ ನೀಡಬೇಕಾಗಿರುವ ಸೌಲಭ್ಯದ ಬಗ್ಗೆ ನೀವು proposal ಎಂದು ಹೇಳಿದಿರಿ, ಅದನ್ನು order ಮಾಡಬೇಕೆಂದು ನಾನು request ಮಾಡಿಕೊಳ್ಳುತ್ತೇನೆ. ಶತಶತಮಾನಗಳಿಂದ ತುಳಿತಕ್ಕೊಳಗಾಗಿರುವ ಜನಾಂಗವಿದು, ದಯವಿಟ್ಟು ನೀವು ಅದನ್ನು order ಮಾಡಿ, proposal ಬೇಡ. ಇದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ.

2. ವಿಷಯ: ಶಿರಾಡಿ ಘಾಟ್ ರಸ್ತೆಯಲ್ಲಿ ಸಂಚಾರ ಸುವ್ಯವಸ್ಥೆಗೊಳಿಸುವ ಬಗ್ಗೆ.

ಶ್ರೀ ವಿ. ಸುನೀಲ್ ಕುಮಾರ್ (ಕಾರ್ಕಳ):– ಮಾನ್ಯ ಅಧ್ಯಕ್ಷರೆ, ಕಳೆದ ಕೆಲವು ದಿನಗಳಿಂದ ಶಿರಾಡಿ ಘಾಟ್‌ನಲ್ಲಿ ದೊಡ್ಡ ಪ್ರಮಾಣದ ಸಂಚಾರ ಅಸ್ತವ್ಯಸ್ತವಾಗಿ traffic jam ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮಂಗಳೂರು ಜಿಲ್ಲೆಯಿಂದ ಬೆಂಗಳೂರಿಗೆ ತಲುಪಬೇಕಾದರೆ ಹರಸಾಹಸಪಟ್ಟುಕೊಂಡು ತಲುಪುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ತಕ್ಷಣ ಸರ್ಕಾರ ಈ ಸಂಚಾರ ವ್ಯವಸ್ಥೆಯನ್ನು ಸರಿಮಾಡುವ ದೃಷ್ಟಿಯಿಂದ ಮತ್ತು ಪರ್ಯಾಯ ವ್ಯವಸ್ಥೆಯನ್ನು ಮಾಡುವ ದೃಷ್ಟಿಯಿಂದ ಹಾಸನ ಮತ್ತು ಮಂಗಳೂರು ಜಿಲ್ಲೆ ಎರಡೂ ಜಿಲ್ಲೆಯ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಸಂಚಾರ ವ್ಯವಸ್ಥೆಯನ್ನು ಸರಿಮಾಡುವುದಕ್ಕೆ ವಿಶೇಷವಾದ ಗಮನವನ್ನು ಕೊಡಬೇಕೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು:– ಉತ್ತರಿಸಬೇಕಾದ ಮಂತ್ರಿಗಳು ಸದನದಲ್ಲಿ ಹಾಜರಿಲ್ಲ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನಾ ಸಚಿವರು):– ಮಾನ್ಯ ಅಧ್ಯಕ್ಷರೆ, ಸುನೀಲ್‌ಕುಮಾರ್‌ರವರು ಪ್ರಸ್ತಾಪ ಮಾಡಿದ ವಿಚಾರಕ್ಕೆ ಸಂಬಂಧಪಟ್ಟಂತೆ

ಲೋಕೋಪಯೋಗಿ ಸಚಿವರು ಉತ್ತರ ನೀಡಬೇಕಾಗಿದ್ದು, ಅವರು ವಿಧಾನಪರಿಷತ್ ಸದನದಲ್ಲಿ ಭಾಗಿಯಾಗಿರುವುದರಿಂದ ಅವರು ಬಂದ ತಕ್ಷಣ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು:– ಶ್ರೀ ಎನ್. ಚಲುವರಾಯಸ್ವಾಮಿ.

3. ವಿಷಯ: ಮೇಲುಕೋಟೆ ಶ್ರೀ ಚೆಲುವನಾರಾಯಣಸ್ವಾಮಿ ದೇಗುಲದ ಜೀರ್ಣೋದ್ಧಾರದ ಬಗ್ಗೆ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ):– ಮಾನ್ಯ ಅಧ್ಯಕ್ಷರೆ, ಮೇಲುಕೋಟೆಯಲ್ಲಿ 3 ದಿವಸದ ಹಿಂದೆ ಅರ್ಚಕರಿಗೆ ಸಂಬಳ ಕೊಟ್ಟಿಲ್ಲವೆಂದು ಎಲ್ಲಾ ಅರ್ಚಕರು ಸೇರಿ ದೇವಸ್ಥಾನದ ಬಾಗಿಲು ಮುಚ್ಚಿದ್ದರು. ಈಗ ಎ.ಸಿ. ರವರು ಹೋಗಿ ದೇವಸ್ಥಾನದ ಬಾಗಿಲನ್ನು ತೆಗೆಸಿದ್ದಾರೆ. ಇದನ್ನು ಕೂಡಲೇ ಸರಿಪಡಿಸಬೇಕು ಮತ್ತು ಅಲ್ಲಿ ಒಂದು ರಾಜಗೋಪುರ ಕುಸಿದು ಬೀಳುವ ಪರಿಸ್ಥಿತಿಯಲ್ಲಿದ್ದು, ಅದರ ಪಕ್ಕದಲ್ಲಿ ಕಂಬಗಳಿವೆ. ಅವು ಸಹ ವಾಲಿಕೊಂಡಿರುವುದರಿಂದ ಜನರು ಓಡಾಡುವ ಸಂದರ್ಭದಲ್ಲಿ ಬಿದ್ದರೆ, ಸಾವು ಸಂಭವಿಸುವ ಸಂದರ್ಭ ಬರಬಹುದಾದ್ದರಿಂದ ದಯಮಾಡಿ, ಇದನ್ನು ತಪ್ಪಿಸಬೇಕು. ಇಲಾಖೆಯಿಂದ ಮೇಲುಕೋಟೆಯನ್ನು ಕಡೆಗಣಿಸುತ್ತಿರುವುದರಿಂದ ಪ್ರಾಚೀನ ಕಾಲದ್ದು ಹಾಗೂ ಬಹಳ ಯಶೋಗಾಥೆ ಹೊಂದಿರುವ ಸ್ಥಳ, ದಯಮಾಡಿ ಈ ರೀತಿಯ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಸರ್ಕಾರ ಹೆಚ್ಚಿನ ಗಮನ ಹರಿಸಬೇಕೆಂದು ಕೋರುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನಾ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಚಲುವರಾಯಸ್ವಾಮಿಯವರು ಎತ್ತಿರುವಂಥ ವಿಚಾರಕ್ಕೆ ಸಂಬಂಧಿಸಿದಂತೆ ಉತ್ತರ ನನ್ನ ಬಳಿ ಇದೆ. ಈ ಉತ್ತರವನ್ನು ಅವರಿಗೆ ಇನ್ನು ಹತ್ತು ನಿಮಿಷಗಳಲ್ಲಿ ಕಳುಹಿಸಿಕೊಡುತ್ತೇನೆ. ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕು ಮೇಲುಕೋಟೆ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದ ಚಿನ್ನದ ಬಾಗಿಲಿನ ಕೆಲಸ